ಕರ್ನಾಟಕ ಸರ್ಕಾರ

ಜನವರಿ 25, 2017

# ಮಾಜಿ ಶಾಸಕ ಭೂಪತಿ ಅವರ ನಿಧನಕ್ಕೆ ಮುಖ್ಯಮಂತ್ರಿ ಶೋಕ

**ಬೆಂಗಳೂರು, ಜನವರಿ 25:**

ಮಾಜಿ ಶಾಸಕ ಯು. ಭೂಪತಿ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಎಡಪಂಥೀಯ ಹಿನ್ನೆಲೆಯೊಂದಿಗೆ 1985 ರ ಚುನಾವಣೆಯಲ್ಲಿ ಸಂಡೂರು ಕ್ಷೇತ್ರದಿಂದ ಸ್ಪರ್ಧಿಸಿ ರಾಜ್ಯ ವಿಧಾನ ಸಭೆಯನ್ನು ಪ್ರವೇಶಿಸಿದ್ದ ಯು ಭೂಪತಿ ಅವರು ತಮ್ಮ ಪ್ರಗತಿ ಪರ ನಡೆಗೆ ಹೆಸರಾಗಿದ್ದರು. ಸೃಜನ ವ್ಯಕ್ತಿ ಹಾಗೂ ಕ್ರಿಯಾಶೀಲ ವ್ಯಕ್ತಿತ್ವದ ಭೂಪತಿ ಅವರು ಮೂಢ ನಂಬಿಕೆಗಳ ವಿರುದ್ಧ ಸಮರ ಸಾರಿ, ಯುವ ಜನತೆಯಲ್ಲಿ ವೈಜ್ಞಾನಿಕ ಹಾಗೂ ವೈಚಾರಿಕ ಚಿಂತನೆಗಳನ್ನು ಪಸರಿಸುವಲ್ಲಿ ಅತ್ಯಂತ ಕಳಕಳಿ ಮತ್ತು ಕಾಳಜಿ ಹೊಂದಿದ್ದರು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಭೂಪತಿ ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ. ಅವರ ಅಗಲಿಕೆಯಿಂದ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಪತ್ನಿ ಹಾಗೂ ಸಾಹಿತಿ ಡಾ ವಸುಂಧರಾ ಮತ್ತು ಮಕ್ಕಳಿಗೆ, ಭೂಪತಿ ಅವರ ಬಂಧು-ಮಿತ್ರರಿಗೆ ಕರುಣಿಸಲಿ ಎಂದು ಮುಖ್ಯಮಂತ್ರಿ ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

*****************

ಡಿ ಪಿ ಎಂ